**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.33/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ಮನೋಜ |
| ತಂದೆಯ ಹೆಸರು | : | ದೇವೆಂದ್ರಪ್ಪ |
| ವಯಸ್ಸು | : | 26 ವರ್ಷ |
| ಉದ್ಯೋಗ | : | ಚಾಲಕ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 5

ಸಿ.ಡಬ್ಲ್ಯೂ 2

ದಿ: 29-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ನನಗೆ ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇರುತ್ತದೆ. ಆ ದಾಖಲೆ ಅಮಾನತ್ತು ಪಂಚನಾಮೆ ಇದ್ದು, ಅದನ್ನು ನಿಪಿ-7 ಅಂತ, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಅಂತ ಗುರುತಿಸಲಾಯಿತು. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ, ಅದರಲ್ಲಿ ಸಾಕ್ಷಿಯು ತಾನು ಇರುವುದಾಗಿ ಹೇಳುತ್ತಾರೆ. ಈ ಫೋಟೋವನ್ನು ನಿಪಿ-8 ಅಂತ ಗುರುತಿಸಲಾಯಿತು. ಈ ಫೋಟೋದಲ್ಲಿ ನನ್ನೊಂದಿಗೆ ಚಾಸಾ-3, ಆರೋಪಿ ಮತ್ತು ಪಿ.ಎಸ್.ಐ. ರವರು ಇರುತ್ತಾರೆ. ದಿಃ 21-09-2022 ರಂದು ದಾವಣಗೆರೆಯ ಹೈಸ್ಕೂಲ್ ಮೈದಾನದಲ್ಲಿ ನಿಪಿ-7 ಕ್ಕೆ ಸಹಿ ಮಾಡಿದ್ದೇನೆ. ಅಲ್ಲಿಗೆ ನನ್ನನ್ನು ಪಿ.ಎಸ್.ಐ. ರವರು ಕರೆಸಿದ್ದರು. ಅಲ್ಲಿ ಹಿಂದೂ ಮಹಾಸಭಾ ಗಣಪತಿ ಇಟ್ಟಿದ್ದೆವು, ಅದಕ್ಕೆ ಸಂಬಂಧಪಟ್ಟ ಕೆಲಸ ಮಾಡುತ್ತಿರುವಾಗ ರಾತ್ರಿ 12.00 ಗಂಟೆ ಮೇಲಾಗಿತ್ತು ಬೇರೆ ಯಾರೂ ಇರಲಿಲ್ಲ. ರಮೇಶ ನಾಯ್ಕ ಎಂಬ ಆರೋಪಿಯನ್ನು ಪಿ.ಎಸ್.ಐ. ರವರು

ಕರೆದುಕೊಂಡು ಬಂದಿದ್ದರು. ಆರೋಪಿ ಆನಂದರವರ ವಿರುದ್ಧ ಗಲಾಟೆ ಮಾಡಿದ್ದಾರೆ ಅಂತ ಗೊತ್ತಾಯಿತು. Recovery ಮಾಡಲು ನಮ್ಮನ್ನು ಕರೆಸಿದ್ದರು. ಚಾಕು ಹಿಡಿದುಕೊಂಡು ಫೋಟೋ ತೆಗೆಸಿದರು. ಅದು ತರಕಾರಿ ಎಚ್ಚುವ ಚಾಕು ಇತ್ತು. ಗಲಾಟೆ ಆಗಿರುವ ಬಗ್ಗೆ ಮಾತ್ರ ಗೊತ್ತು. ಆ ಚಾಕುವನ್ನು ಈಗ ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.3 ಅಂತ ಗುರುತಿಸಲಾಗಿದೆ. ನಿಪಿ-8 ರಲ್ಲಿರುವ ಚಾಕು ನ್ಯಾಯಾಲಯದ ಮುಂದೆ ಇರುವ ಮು.ಮಾ.3 ರ ಚಾಕು ಇರುತ್ತದೆ. ಮಧ್ಯರಾತ್ರಿ 12.00 ರಿಂದ ಅರ್ಧ ಗಂಟೆ ಈ ಮಹಜರ ಮಾಡಿದರು. ರಮೇಶ ನಾಯ್ಕ ಅಂದರೆ ಈ ದಿನ ನ್ಯಾಯಾಲಯದಲ್ಲಿ ಇರುವ ಆರೋಪಿ ಇರುತ್ತಾರೆ. ಆರೋಪಿಯನ್ನು ಸಾಕ್ಷಿದಾರರು ನೋಡಿ ಗುರುತಿಸುತ್ತಾರೆ. ಆರೋಪಿ ನಿಪಿ-8 ರಲ್ಲಿ ಕಂಡು ಬರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಸ್.ಜೆ.ಕೆ., ವಕೀಲರಿಂದ ಆರೋಪಿತರ ಪರವಾಗಿ:**

2. ಈ ಘಟನೆಯನ್ನು ನಾನು ನೋಡಿಲ್ಲ. ಪಿ.ಎಸ್.ಐ. ರವರು ಚಾಕುವನ್ನು ತೋರಿಸಿದರು. ಪಿ.ಎಸ್.ಐ. ರವರು ಗಲಾಟೆಯಾಗಿದೆ ಅಂತ ತಿಳಿಸಿದರು. ಮು.ಮಾ.3 ರಂತಹ ಚಾಕು ಮಾರ್ಕೆಟ್ ನಲ್ಲಿ ಸಿಗುತ್ತವೆ ಅಂದರೆ ನಿಜ. ಗಣೇಶನ ಪ್ರತಿಷ್ಠಾನೆ ನಿಪಿ-8 ರಲ್ಲಿ ಕಂಡು ಬರುವುದಿಲ್ಲ. ನಿಪಿ-8 ಪೊಲೀಸ್ ಠಾಣೆಯ ಎದುರುಗಡೆ ತೆಗೆಸಿದ್ದಾರೆ ಅಂದರೆ ಸುಳ್ಳು. ಸಾಕ್ಷಿದಾರರು ಹೇಳುತ್ತಾರೆ ಹೈಸ್ಕೂಲ್ ಮೈದಾನದಲ್ಲಿ ತೆಗೆದಿರುತ್ತಾರೆ.

3. ನಾನು ಹೈಸ್ಕೂಲ್ ಮೈದಾನ ಸಮೀಪದ ನಿವಾಸಿ ಅಲ್ಲ. ನಾನು ನಿಟ್ಟುವಳ್ಳಿಯಲ್ಲಿ ವಾಸ ಇರುತ್ತೇನೆ ಅಂದರೆ ನಿಜ. ಹೈಸ್ಕೂಲ್ ಮೈದಾನದಲ್ಲಿ ಈ ಪ್ರಕರಣಕ್ಕೆ ಸಂಬಂಧಪಟ್ಟ ನಿರ್ದಿಷ್ಟ ಸ್ಥಳ ಯಾವುದು ಅಂತ ನನಗೆ ಗೊತ್ತಿಲ್ಲ. ನಿಪಿ-7 ರಲ್ಲಿ ಏನು ಬರೆದಿದ್ದಾರೆ ಅಂತ ನಾನು ಓದಿ ತಿಳಿದುಕೊಂಡಿಲ್ಲ ಮತ್ತು ಯಾರು ನನಗೆ ಓದಿ ಹೇಳಿಲ್ಲ. ಘಟನಾ ಸ್ಥಳದ ಚಕ್ಕುಬಂದಿ ಮತ್ತು ಆಸ್ತಿ ಸಂಖ್ಯೆ ಎಷ್ಟು ಅಂತ ನನಗೆ ಗೊತ್ತಿಲ್ಲ. ಪಿ.ಎಸ್.ಐ. ರವರು ಸಹಿ ಮಾಡಲು ಹೇಳಿದರು ಅದಕ್ಕೆ ನಾನು ಸಹಿ ಮಾಡಿದ್ದೇನೆ ಅಂದರೆ ಸರಿ.

Recovery procedure ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಚಾಕು ಅಮಾನತ್ತುಪಡಿಸಿಕೊಂಡಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಚಾಸಾ-1 ರವರು ನನಗೆ ಪರಿಚಯಸ್ಥರು ಅಲ್ಲ. ಅವರ ಮಾತು ಕೇಳಿ ನಾನು ಸುಳ್ಳು ಸಾಕ್ಷಿ ಕೊಡುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರುವಿಚಾರಣೆ:** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.